463(649) ಶ್ರೀ ರಘುಪತಿ ಭಟ್.ಕೆ. (ಉಡುಪಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಉಡುಪಿ ಜಿಲ್ಲೆಯಲಿ ಸ್ಫೂರ್ತಿ ಸಂಸ್ಥೆ ಕೊರಗರ ಮಕ್ಕಳ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದಲ್ಲಿ ಈ ವರ್ಷದ ಅನುದಾನವನ್ನು ಬಿಡುಗಡೆ ಗೂಳಿಸದೇ ಇರುವುದು ನಿಜವೇ;

ಇ) ಹೌದಾದಲ್ಲಿ, ಯಾವಗ ಬಿಡಿಗಡೆ ಮಾಡಲಾಗುವುದು?

ಡಾ॥ ವೈ. ನಾಗಪ್ಪ(ಸಮಾಜ ಕಲ್ಯಾಣ ಸಚಿವರು) :

ಅ) ಹೌದು

ಆ) ಜಿಲ್ಲಾ ಪಂಚಾಯಿತಿಯು ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೇದೂರಿನ ಸ್ಫೂರ್ತಿ ಸಂಸ್ಥೆಯ ಅನುದಾನಿತ ವಿದ್ಯಾರ್ಥಿನಿಲಯಕ್ಕೆ ಅನುದಾನವನ್ನು ತನ್ನ ಆಯವ್ಯಯದಲ್ಲಿ ಒದಗಿಸಿಕೊಳ್ಳಬೇಕು. 2004–05ನೇ ಸಾಲಿನಲ್ಲಿ ಆಯವ್ಯಯದಲ್ಲಿ ಅವಕಾಶ ಮಾಡಿಕೂಂಡಿರುವುದಿಲ್ಲ. ಆದುದರಿಂದ ಸಂಸ್ಥೆಗೆ ಅನುದಾನ ಬಿಡುಗಡೆ ಆಗಿರುವುದಿಲ್ಲ.

ಇ) ಅನುದಾನವನ್ನು ಒದಗಿಸುವ ಪ್ರಸ್ತಾವನೆಯನ್ನು ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ.

465(747) ಶ್ರೀ ರಾಜೇಂದ್ರನ್ ಎಸ್(ಕೆ.ಜಿ.ಎಫ್) ಮಾನ್ಯ ರೇಷ್ಮೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯಲ್ಲಿ, ಅದರಲ್ಲೂ ಮುಖ್ಯವಾಗಿ ಕೆ.ಜಿ.ಎಫ್‌ನಲ್ಲಿ ರೇಷ್ಮೆ ವೃತ್ತಿಯನ್ನು ಅಭಿವೃದ್ಧಿ ಪಡಿಸುವುದರ ಮೂಲಕ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲು ಸರ್ಕಾರ ಕೈಗೂಂಡಿರುವ ಅಥವಾ ಕೈಗೂಳ್ಳಲಿರುವ ಕ್ರಮಗಳೇನು?

ಶ್ರೀ ಚನ್ನಿಗಪ್ಪ (ರೇಷ್ಮೆ ಸಚಿವರು) :

ಅ) ಇಡೀ ಕರ್ನಾಟಕದಲ್ಲಿ ಕೋಲಾರ ಜಿಲ್ಲೆಯಲ್ಲಿ ಅತ್ಯದಿಕ ರೇಷ್ಮೆ ವ್ಯವಸಾಯ ನಡೆಯುತ್ತಿದೆ. ಈ ಜಿಲ್ಲೆಯಲ್ಲಿ 25031 ಹೆಕ್ಟೇರ್ ಹಿಪ್ಪುನೇರಳೆ ಇದೆ. ವಾರ್ಷಿಕವಾಗಿ 16081 ಮೆ.ಟನ್ ರೇಷ್ಮೆ ಗೂಡು ಉತ್ಪಾದನೆಯಾಗುತ್ತಿದೆ. ಇದರ ಮೌಲ್ಯ ಸುಮಾರು ರೂ.200.00 ಕೋಟಿಗಳಾಗುತ್ತದೆ. ರೇಷ್ಮೆ ಕೃಷಿಗೆ ಮುಖ್ಯವಾಗಿ ಸೂಕ್ತ ಬೂಮಿ ಮತ್ತು ನೀರು ಬೇಕಾಗುತ್ತದೆ.

ಕೋಲಾರ ಜಿಲ್ಲೆಯ ಕೆ.ಜಿ.ಎಫ್. ಪ್ರದೇಶ ಬಂಗಾರಪೇಟೆ ತಾಲ್ಲೂಕಿನಲ್ಲಿದೆ. ಈ ತಾಲ್ಲೂಕಿನಲ್ಲಿ 2257 ಹೆಕ್ಟೇರನಲ್ಲಿ ರೇಷ್ಮೆ ವ್ಯವಸಾಯವಿದೆ. ಇಲ್ಲಿ ವಾರ್ಷಿಕವಾಗಿ 1364 ಮೆ.ಟನ್. ರೇಷ್ಮೆ ಗೂಡು ಉತ್ಪಾದನೆಯಾಗುತ್ತಿದೆ. ಆದರೆ ಕೆ.ಜಿ.ಎಫ್‌ನಲ್ಲಿರುವ ಭೂಮಿಯು ಭಾರತ್ ಗೋಲ್ಡ್ ಮೈನ್ಸ್‌ಗೆ ಸೇರಿದೆ. ಇಲ್ಲಿ ಯಾವುದೇ ಖಾಸಗಿ ವ್ಯಕ್ತಿಗಳಿಗೆ ಭೂಮಿ ಒಡೆತನವಿಲ್ಲ. ಸಧ್ಯಕ್ಕೆ ಮುಚ್ಚಲಿರುವ ಭಾರತ್ ಗೋಲ್ಡ್ ಮೈನ್ಸ್ ಸಂಸ್ಥೆಯು ಯಾರಿಗೂ ಭೂಮಿಯನ್ನು ನೀಡಿಲ್ಲ. ಆದ್ದರಿಂದ ಈ ಪ್ರದೇಶ ರೇಷ್ಮೆ ಕೃಷಿಗೆ ಅನುಕೂಲಕರವಾಗಿದ್ದರೂ ಸಹ ಭೂಮಿ ಇಲ್ಲದಿರುವ ಪ್ರಯುಕ್ತ ರೇಷ್ಮೆ ಕೃಷಿಯನ್ನು ಅಭಿವೃದ್ಧಿಪಡಿಸಲಾಗಿಲ್ಲ.